ಭದ್ರಾವತಿಯವರಾದ ಸದಾನಂದ ಸಿ. ಅವರು ಓದಿಗಾಗಿ ಜರ್ಮನಿಗೆ ತೆರಳಿದವರು. ನಂತರ ವೃತ್ತಿಯ ಸಲುವಾಗಿ ಅಲ್ಲಿಯೇ ನೆಲೆಸಿದ್ದಾರೆ. ಕನ್ನಡ ಸಾಹಿತ್ಯದ ಒಲವು ಪ್ರೌಢಶಾಲೆಯಿಂದಲೇ ಅವರಲ್ಲಿ ಮೂಡಿತ್ತು. ಕವಿತೆಗಳನ್ನು ಬರೆಯುತ್ತಿದ್ದ ಅವರು, 'ಕಾಮನಬಿಲ್ಲ ಹಿಡಿಯುವ ಆಸೆ' ಎಂಬ ಕವನ ಸಂಕಲನ ಪ್ರಕಟಿಸಿದ್ದಾರೆ. ಇದೀಗ ಅವರ ಒಲವು ಕಥೆಗಳತ್ತ ಹೊರಳಿದೆ. ಟೆನ್ನಿಸ್ ಆಡುವುದು ಅವರ ಮತ್ತೊಂದು ಹವ್ಯಾಸ.

ನಾನು ಈ ಕ್ಷಣಕ್ಕಾಗಿಯೇ ಎಂಟು ವರ್ಷಗಳಿಂದ ಕಾಯುತ್ತಿದ್ದೆ. ಇಷ್ಟು ವರ್ಷಗಳ ಪ್ರಯತ್ನಕ್ಕೆ ಇವತ್ತು ಉತ್ತರ ಸಿಕ್ಕಿದೆ. We just have to confirm one more thing now. ನೀವೀಗ ನಾಳೇನೇ ಈ ಹಿರಿಯ ವ್ಯಕ್ತಿಯ ಬಗ್ಗೆ ಮಾಹಿತಿ ಸಂಗ್ರಹಿಸಲು ಹುಬ್ಬಳ್ಳಿಗೆ ಹೊರಡುತ್ತೀರಿ. ಪ್ರಶ್ನಾವಳಿಯನ್ನು ನಾನು ನಿಮಗೆ ಮೇಲ್ ಮಾಡುತ್ತೇನೆ. If my theory is right, we may be at the doorsteps of the biggest discovery of 21st century Raghav. Just keep it between two of us till the dust settles.'

* * *

ಮಾರನೇ ದಿನವೇ ರಾಘವ, ಡಾ.ಅನುರಾಧರ ಆದೇಶದಂತೆ ಈ 65 ವರ್ಷದ ಯಜಮಾನರನ್ನು ಹುಡುಕಿಕೊಂಡು ಹುಬ್ಬಳ್ಳಿಗೆ ಹೊರಟ. ಒಂದೂವರೆ ಘಂಟೆಯ ಆಟೊ ಚಾಲನೆ, ಎರಡು ಬದಲಾದ ಮನೆ ವಿಳಾಸಗಳ ಕುರುಹು ಬೆನ್ನತ್ತಿ, ಕೊನೆಗೂ 'ಮೈತ್ರಿವನ' ಎಂಬ ಮನೆಯ ಎದುರು ಬಂದು ನಿಂತಿದ್ದ. ಬೆಲ್ಲು ಒತ್ತಿದಾಗ ಹೊರಬಂದು ಬಾಗಿಲು ತೆಗೆದ ಮಹಿಳೆ ಎದುರಿಗೆ ನಿಂತಿದ್ದ ಯಾವುದೋ ಅಧಿಕಾರಿಯಂತೆ ಕಾಣುತ್ತಿದ್ದ ರಾಘವನನ್ನು ನೋಡುತ್ತಲೇ, ಇವನೊಂದಿಗೆ ಒಂದು ಮಾತೂ ಆಡದೆ, 'ರೀ ನಿಮ್ಮನ್ನು ನೋಡಲು ಯಾರೋ ಬಂದಿದ್ದಾರೆ' ಎಂದು ಕೂಗುತ್ತಾ ತೆರೆದ ಬಾಗಿಲು ತೆರೆದಂತೆ ಒಳಗೆ ಸರಸರನೆ ಹೋಗಿಬಿಟ್ಟಳು. ಎರಡ್ಮೂರು ನಿಮಿಷಗಳ ನಂತರ ಬಂದ ಪಂಚೆ ಶೆರಟು ತೊಟ್ಟ ಮಧ್ಯ ವಯಸ್ಸಿನ ವ್ಯಕ್ತಿಗೆ ತನ್ನ ಪರಿಚಯ ಮಾಡಿಕೊಂಡು ತಾನು ಬಂದಿರುವ ಉದ್ದೇಶವನ್ನು ತಿಳಿಸಿದ. ಒಳಕ್ಕೆ ಕರೆದು ಇಬ್ಬರೂ ಹರಟತೊಡಗಿದರು.

ಈ 65 ವರ್ಷದ ವ್ಯಕ್ತಿಯ ಹೆಸರು ದಾನಪ್ಪ ದಳವಾಯಿ. ಈ ವ್ಯಕ್ತಿಯ ತಂದೆ. ದೂರದ ರಾಮಸಂದ್ರದಿಂದ ಹುಬ್ಬಳ್ಳಿಗೆ ಎಮರ್ಜನ್ಸಿ ಸಮಯದಲ್ಲಿ ಧಾರವಾಡ ಮುನ್ಸಿಪಾಲ್ಟಿಯ ತಹಸೀಲ್ದಾರ್ ಕಚೇರಿಯಲ್ಲಿ ಗುಲಾಮರಾಗಿದ್ದ ತಮ್ಮ ಅಣ್ಣನಾದ ರಾಮಪ್ಪ ದಳವಾಯಿಯನ್ನು ಆಶ್ರಯಿಸಿ ವಲಸೆ ಬಂದಿದ್ದರು. ರಾಮಪ್ಪರು ದಾನಪ್ಪರಿಗೆ ಗೊತ್ತಿದ್ದ ಕಿರಾಣಿ ಅಂಗಡಿಯೊಂದರಲ್ಲಿ ಕೆಲಸಕ್ಕೆ ಸೇರಿಸಿದ್ದರು. ಬಹಳ ನಿಷ್ಠಾವಂತರಾಗಿದ್ದ ದಾನಪ್ಪನನ್ನು ಮೆಚ್ಚಿ ಆ ಅಂಗಡಿಯ ಮಾಲೀಕ ತಮ್ಮ ಮಗಳನ್ನು ಅವರಿಗೆ ಮದುವೆ ಮಾಡಿಕೊಟ್ಟು ಅವರ ಸ್ವಂತಕ್ಕೆ ಇನ್ನೊಂದು ಕಿರಾಣಿ ಅಂಗಡಿಯನ್ನು ಮಾಡಿಸಿಕೊಟ್ಟರಂತೆ. ಕ್ರಮೇಣ ಅವರ ಸಂಸಾರ ಬೆಳೆದು ಇಬ್ಬರು ಮಕ್ಕಳಾದರಂತೆ. ಆ ಮಕ್ಕಳಲ್ಲಿ ಎರಡನೆಯವನೇ ಈಗ ರಾಘವನಿಗೆ ಇದೆಲ್ಲವನ್ನೂ ಹೇಳುತ್ತಿದ್ದ ನಂಜಪ್ಪ ದಳವಾಯಿ. ಎಲ್ಲಕ್ಕೂ ಮುಖ್ಯವಾಗಿ ರಾಘವ ಹುಡುಕಿಕೊಂಡು ಬಂದಿದ್ದ ದಾನಪ್ಪಾರು ಅದಾಗಲೇ ಗಂಟಲು ಕ್ಯಾನ್ಸರ್‌ನಿಂದಾಗಿ ತೀರಿ ಹೋಗಿ 5 ವರ್ಷಗಾಗಿದ್ದವಂತೆ.

ತಾನು ಹುಡುಕಿ ಬಂದ ವ್ಯಕ್ತಿ ಅದಾಗಲೇ ತೀರಿ ಹೋಗಿದ್ದಾರೆಂದು ತಿಳಿದ ಮೇಲೆ ಡಾ.ಅನುರಾಧರಿಗೆ ಫೋನು ಮಾಡಿ ಈ ವಿಚಾರ ತಿಳಿಸಿದ. ಅದು ಅವರು ಎಣಿಸಿದಂತೆಯೇ ಆಗಿತ್ತು. ಫೋನಿನ ಮೂಲಕ ಬಂದ ಹೊಸ ಆದೇಶಗಳ ಮೇರೆಗೆ ರಾಘವ ದಾನಪ್ಪರ ಬಗ್ಗೆ ಇನ್ನಷ್ಟು ಪ್ರತ್ಯೇಕ ವಿಚಾರಗಳು, ಅವರ ಫೋಟೋಗಳು, ಇಷ್ಟಗಳು, ಅವರು ಸಂಚರಿಸುತ್ತಿದ್ದ ಜಾಗಗಳು ಹೀಗೆ ಇನ್ನಷ್ಟು ಮಾಹಿತಿಗಳನ್ನೆಲ್ಲ ತನ್ನ ಕ್ಯಾಮೆರಾದಲ್ಲಿ ಸೆರೆಹಿಡಿದುಕೊಂಡ. ನಂತರ ಹುಬ್ಬಳ್ಳಿಯಲ್ಲಿಯೇ ಇದ್ದ ರಾಮಪ್ಪರ ಇನ್ನೊಂದು ಕುಟುಂಬವನ್ನೂ